# ನೀವು ಕೇಳಿದಿರಿ?

ಓಂಚನ್ನೇಶ್, ಅರಬಿಳಚಿ ಕ್ಯಾಂಪ್

*ಬುದ್ಧನಿಗೆ ಮರದ ಕೆಳಗೇ ಯಾಕೆ ಜ್ಞಾನೋದಯವಾಯ್ತು?*



ಅದೇ ಸೂಕ್ತ ಸ್ಥಳ! ಇದುವರೆಗೆ ಜ್ಞಾನೋದಯವಾಗಲು ಯಾವ ಋಷಿಯೂ ಮರ ಹತ್ತಿದ ದಾಖಲೆ ಇಲ್ಲ.

ಡೈರಿ ವಿಶ್ವನಾಥ್, ಬೆಂಗಳೂರು

*ಸ್ಥಿತಪ್ರಜ್ಞತೆ ಸಾಧ್ಯವೆ?*

ಈಗಿನ ಕನ್ನಡಿಗರಿಗೆ ಅದನ್ನು ಸಾಧಿಸುವುದಿರಲಿ, ಬರೆಯಲು, ಉಚ್ಚರಿಸಲು ಸಹ ಸಾಧ್ಯವಿಲ್ಲ!

ಆರ್.ರಾಮಸ್ವಾಮಿ ಅಯ್ಯಂಗಾರ್, ಬೆಂಗಳೂರು

*ಬ್ರಹ್ಮ ತನ್ನ ಮಗಳನ್ನೇ ಏಕೆ ಮದುವೆಯಾದ?*

ಕ್ಷಮಿಸಿ. ಜಗ ಹುಟ್ಟಿದುದು ಆದಿಶಕ್ತಿಯಿಂದ. ಸರಸ್ವತಿ ಆದಿಶಕ್ತಿಯ ಒಂದು ತುಣುಕು, ಬ್ರಹ್ಮನ ಮಗಳಲ್ಲ.

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ಗಂಟೆಗಟ್ಟಲೆ ಭಾಷಣ ಮಾಡಿಯೂ, ಕೆಲವರು ಕೊನೆಯಲ್ಲಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ ಎನ್ನುತ್ತಾರಲ್ಲಾ...?*



ಸರಿಯೇ. ಅವರದು ಎರಡೇ ಮಾತು, ಮಿಕ್ಕವೆಲ್ಲಾ ಅವರಿವರಿಂದ ಕದ್ದದ್ದು!

ಕುಬೇರಪ್ಪ ಎಂ. ವಿಭೂತಿ, ಹರಿಹರ

*ಸುಧಾವನ್ನು ಒಬ್ಬ ಕೊಂಡು ನಾಲ್ಕು ಜನ ಓದಿದರೆ ಅದು ಜಾಣತನವೋ, ಸ್ವಾರ್ಥವೋ?*

ಕನ್ನಡತನ! ಒಬ್ಬ ತಮಿಳು ಗಾರೆಯವನು ಕೊಂಡು ಓದುವಷ್ಟು ಪತ್ರಿಕೆಯನ್ನು ಒಬ್ಬ ಕನ್ನಡದ ವಿದ್ಯಾವಂತ ಅಧಿಕಾರಿ ಕೊಂಡು ಓದುವುದಿಲ್ಲ.

ಎಂ.ವಿನೋದ್ ಕುಮಾರ್, ಕಂಜುಮಗದ್ದೆಮನೆ

*ಒಳ್ಳೆಯ ರಾಜಕಾರಣಿ ಹೇಗಿರುತ್ತಾನೆ?*

ಇಷ್ಟು ಹೊತ್ತಿಗೆ ಅವನ ಎಲ್ಲಾ ಮೂಳೆಗಳೂ ಹೂತ ಗೋರಿಯಲ್ಲೇ ಶಿಥಿಲವಾಗಿಬಿಟ್ಟಿರುತ್ತವೆ!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ

*ವೈದ್ಯೋ ನಾರಾಯಣೋ ಹರಿಃ ಎನ್ನುತ್ತಾರೆ; ವೈದ್ಯರಾಜನೇ ನೀ ಯಮನ ಅಣ್ಣ ಎನ್ನುತ್ತಾರೆ. ಏಕೀ ದ್ವಂದ್ವ?*

ಕೊಟ್ಟ ಟ್ರೀಟ್‌ಮೆಂಟ್‌ನ ನೇರ ಎಫೆಕ್ಟ್‌ಗೆ ಮೊದಲನೆಯದು, ಸೈಡ್ ಎಫೆಕ್ಟ್‌ಗೆ ಎರಡನೆಯದು!

ಪಿ.ಜೆ. ರಾಘವೇಂದ್ರ, ಮೈಸೂರು

*ಆ ಮೆಗಾಸೀರಿಯಲ್‌ಗೆ ಪ್ರಾರಬ್ಧ ಅಂತ ಹೆಸರಿಡಬಹುದೆ?*

ಛೆ! ನಾಯಿಗೆ ನಾಯಿ ಎಂದು ಯಾರಾದರೂ ಹೆಸರಿಡುತ್ತಾರೆಯೆ!

ಎಸ್.ಎ.ಮೋಹನ್‌ರಾಜು, ಶಿವಮೊಗ್ಗ

*ತನಗೆ ಬಂದ ಮುಪ್ಪು, ತಾನು ಮಾಡಿದ ತಪ್ಪು, ಇವೆರಡನ್ನೂ ಸುಲಭವಾಗಿ ಒಪ್ಪಿಕೊಳ್ಳುವವರು ಯಾರು?*

ಸೀನಿಯರ್ ಸಿಟಿಝನ್ ಸೌಲಭ್ಯ ಬೇಡುವವರು, ಅಪ್ರೂವರ್‌ಗಳು!

ಹಾಡ್ಯ ಬಿ. ಜಯಾನಂದ, ಮೈಸೂರು

*ತಾರೆಯರಿಗೆ, ಕ್ರೀಡಾಪಟುಗಳಿಗೆ ಫ್ಯಾನ್‌ಗಳಿರುತ್ತಾರೆ. ರಾಜಕಾರಣಿಗಳಿಗೆ?*

ಟ್ಯೂಬ್‌ಲೈಟ್‌ಗಳು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಿಮ್ಮ ಉತ್ತರಗಳಲ್ಲಿ ಕೈಲಾಸಂ, ಬೀಚಿ, ನವರತ್ನರಾಂರವರ ದರ್ಶನವಾಗುತ್ತದಲ್ಲಾ...?*

ಆಗಿದ್ದರೆ ಅಚ್ಚರಿಯೇನಿಲ್ಲ. ಅವರೆಲ್ಲಾ ಹಾಸ್ಯದ ಜನಕರು, ನಾನು ಹಾಸ್ಯದ ಕೂಸು!

ಎಸ್.ಎನ್.ಮಹಾಬಲರಾವ್, ಎನ್‌ಆರ್‌ಪುರ

*ಹುಡುಗಿ ಬೆರಳು ಸೋಕಿಸಿದಾಗ ವಿದ್ಯುತ್ ಸಂಚಾರವಾಯಿತು...?*

ಎಚ್ಚರ! ಅಂತಹ ವಿದ್ಯುತ್ ಸಂಚಾರ ವಿತ್ತಕ್ಕೆ ಸಂಚಕಾರ!

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಅಕಸ್ಮಾತ್ ತಿರುಮಲ ತಿರುಪತಿ ಬೆಟ್ಟದ ಮೇಲೆ ಭೂಕಂಪವಾಗಿಬಿಟ್ಟರೆ ಅಲ್ಲಿಯ ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯಗಳ ಗತಿ...?*

ಛೆ! ಅದಕ್ಕಿಂತಲೂ ಅಮೂಲ್ಯವಾದ ಮಾನವ ಜೀವಗಳ ಬಗ್ಗೆ ಯೋಚಿಸುವುದನ್ನು ಬಿಟ್ಟು...

## ಬಹುಮಾನಿತ ಪ್ರಶ್ನೆ

ಎಸ್. ಶ್ರೀಧರ್, ಬೆಂಗಳೂರು

*ಕೇಳುವವರಿಗೆ ಆಸಕ್ತಿ ಇಲ್ಲದಿದ್ದರೂ ಮಾತನಾಡುವವರನ್ನು ಏನೆಂದು ಕರೆಯಬಹುದು?*

ಮೇಷ್ಟ್ರು!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಬಸ್ಸುಗಳಲ್ಲಿ ಚಾಲಕರು ಹಾಡನ್ನು ಕಿವಿಗಡಚಿಕ್ಕುವಷ್ಟು ಜೋರಾಗಿ ಹಾಕುತ್ತಾರಲ್ಲಾ, ಯಾಕೆ?*

ಹಾರನ್ ವೀಕ್ ಅಂತೆ!

ಎಚ್.ಆರ್.ದೇಸಾಯಿ, ರಾಯಚೂರು

*ನದಿಯ ಸುಳಿಯಿಂದ ಪಾರಾಗಬಹುದು, ಸಂಸಾರದ ಸುಳಿಯಿಂದ ಹೇಗೆ ಪಾರಾಗುವುದು?*

ಸುಳಿಗೆ ಸಿಕ್ಕರೂ ಪಾರುಗಾಣಿಸುವ ನಗೆಯ ಹಾಯಿದೋಣಿಯಲ್ಲಿ ಕುಳಿತು!

ಎಚ್.ಜಿ. ಜಗದೀಶ್, ಮೈಸೂರು

*ಇತರ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶ ತುಂಬಾ ಕೊಳಕು. ಇದಕ್ಕೆ ಪರಿಹಾರವೇನು ಸ್ವಾಮಿ?*

ಹೋಲಿಸದಿರುವುದು!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

*ಅಲ್ರಣ್ಣ, ನಮ್ಮಪ್ಪ ನನಗೆ ಪಾಸಾದರೆ ಕಾಲೇಜಿಗೆ ಸೇರಿಸ್ತೀನಿ, ಫೇಲಾದರೆ ಮದುವೆ ಮಾಡ್ತೀನಿ ಅಂತಾರಲ್ಲಾ...?*



ನಿಮ್ಮಪ್ಪನೇ ಒಳ್ಳೆಯವರು. ನಮ್ಮಪ್ಪ ನಾನು ಫೇಲಾದರೆ ತಿಥಿ ಮಾಡ್ತೀನಿ ಅಂದ್ರು!

ಎನ್. ವಸಂತಾ, ಕತ್ತರಿಗುಪ್ಪ

*ತ್ವರಿತ ತೀರ್ಪಿಗಾಗಿ ಆಲಯವೋ, ದೇವಾಲಯವೋ ಅಥವಾ ನ್ಯಾಯಾಲಯವೋ?*

ನಾಟಕಾಲಯ, ಫಿಲ್ಮಾಲಯ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಲಾಯರ್‌ಗಳ ಸಂಘಕ್ಕೆ ಬಾರ್ ಅಸೋಸಿಯೇಷನ್ ಎಂಬ ಹೆಸರೇಕೆ ಸರ್?*

ಅದು Bail, Adjournment, Redressal ಪದಗಳ ಸಂಕ್ಷಿಪ್ತ ರೂಪವಂತೆ!

■ ರಾಮ್